ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳ ಕಾರ್ಯ ಚಟುವಟಿಕೆಗಳು

4088(4445); ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)

ಅ) ರಾಜ್ಯದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳ ಕಾರ್ಯಚಟುವಟಿಕೆಗಳ ಕುರಿತಾದ ವಿವರಗಳೇನು;

ಆ) ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನಿರುದ್ಯೋಗಿಗಳು ದಾಖಲಿಸಿರುವ ಜಿಲ್ಲಾವಾರು ಸಂಖ್ಯಾ ವಿವರಗಳು ಹಾಗೂ ಉದ್ಯೋಗ ದೊರಕಿಸಿಕೊಡುವಲ್ಲಿ ಉದ್ಯೋಗ ವಿನಿಮಯ ಕೇಂದ್ರದ ಕಾರ್ಯನಿರ್ವಹಣೆ ಕುರಿತಾದ ವಿವರಗಳೇನು;

ಇ) ಉದ್ಯೋಗ ಮತ್ತು ತರಬೇತಿ ನೀಡಿಕೆಯ ದಿಸೆಯಲ್ಲಿ ಇಲಾಖೆಯು ಪ್ರಸ್ತುತ ಅನುಷ್ಠಾನ ಗೊಳಿಸುತ್ತಿರುವ ಕಾರ್ಯಕ್ರಮಗಳು ಯಾವುವು;

ಈ) ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೋಂದಣಿ ಮಾಡಿಕೊಂಡವರ ಸಂಖ್ಯೆ ಮತ್ತು ಅವರುಗಳಿಗೆ ನೀಡಿದ ಉದ್ಯೋಗಗಳು ಹಾಗೂ ತರಬೇತುಗಳ ಕುರಿತಾದ ವಿವರಗಳನ್ನು ನೀಡುವುದು?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಉದ್ಯೋಗ ವಿನಿಮಯ ಕೇಂದ್ರಗಳ ಕಾರ್ಯಚಟುವಟಿಕೆಗಳು:–

(1) ನೋಂದಣಿ – ಉದ್ಯೋಗ ನೆರವು:–

ಉದ್ಯೋಗಾಕಾಂಕ್ಷಿಗಳನ್ನು ನೋಂದಾಯಿಸಿ, ನಿಯೋಜಕರಿಗೆ ಪುರಸ್ಕರಿಗೆ ಉದ್ಯೋಗ ನೆರವು ನೀಡಲಾಗುತ್ತಿದೆ.

(2) ವೃತ್ತಿ ಮಾರ್ಗದರ್ಶನ:–

ಉದ್ಯೋಗ ವಿನಿಮಯ ಕಚೇರಿಗಳಿಗೆ ಭೇಟಿ ನೀಡುವ ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ಹಾಗೂ ಪ್ರೌಢ ಶಾಲಾ / ಕಾಲೇಜುಗಳ ಮಟ್ಟದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಾಗೂ ಉದ್ಯೋಗಾವಕಾಶಗಳ ಬಗ್ಗೆ ವೃತ್ತಿ

ಉಪನ್ಯಾಸ, ವೃತ್ತಿ ಸಮ್ಮೇಳನ ಹಾಗೂ ಸಾಹಿತ್ಯ ಪ್ರದರ್ಶನಗಳ ಮೂಲಕ ಮಾಹಿತಿ ಮತ್ತು ಮಾರ್ಗದರ್ಶನ ನೀಡಲಾಗುತ್ತಿದೆ.

(3) ಉದ್ಯೋಗ ಮಾರುಕಟ್ಟೆ ಮಾಹಿತಿ ಸಂಗ್ರಹಣೆ:–

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಆಯಾ ಜಿಲ್ಲಾ ವ್ಯಾಪ್ತಿಯ ಸಾರ್ವಜನಿಕ ಹಾಗೂ ಖಾಸಗಿ ವಲಯದ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಈ ಮಾಹಿತಿಯನ್ನು ರಾಜ್ಯ ಮಟ್ಟದಲ್ಲಿ ಕ್ರೋಢೀಕರಿಸಿ, ಉದ್ಯೋಗ ಮತ್ತು ತರಬೇತಿ ಮಹಾನಿರ್ದೇಶನಾಲಯ, ನವದೆಹಲಿ, ಇಲ್ಲಿಗೆ ಸಲ್ಲಿಸಲಾಗುತ್ತಿದೆ.

ಆ) ಜಿಲ್ಲಾವಾರು ವಿವರಗಳನ್ನು ಅಉಬಂಧ–1 ರಲ್ಲಿ ನೀಡಲಾಗಿದೆ. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿರುವ ಅಭ್ಯರ್ಥಿಗಳನ್ನು ನಿಯೋಜಕರಿಗೆ ಅವರ ಬೇಡಿಕೆ ಅನುಸಾರ ಪುರಸ್ಕರಿಸಿ ಹಾಗೂ ಖಾಸಗಿ ಕ್ಷೇತ್ರದಲ್ಲಿನ ಉದ್ಯೋಗ ಅವಕಾಶಗಳನ್ನು ಉದ್ಯೋಗ ಮೇಳಗಳನ್ನು ಆಯೋಜಿಸುವ ಮೂಲಕ ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿಸಿಕೊಡಲಾಗುತ್ತಿದೆ.

ಇ) ಜಾಗತೀಕರಣ ಮತ್ತು ಖಾಸಗೀಕರಣದಿಂದಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಉದ್ಯೋಗಗಳು ಕ್ಷೀಣಿಸುತ್ತಿದ್ದು, ಖಾಸಗಿ ಕ್ಷೇತ್ರದಲ್ಲಿ ಉದ್ಯೋಗಗಳು ವಿಪುಲವಾಗಿ ಸೃಜನೆಯಾಗುತ್ತಿವೆ. ಆದರೆ, ಖಾಸಗಿ ಕ್ಷೇತ್ರದಲ್ಲಿನ ಉದ್ಯೋಗಗಳಿಗೆ ಪ್ರತ್ಯೇಕ ಕೌಶಲ್ಯದ ಅಗತ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ, ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿದ ಅಭ್ಯರ್ಥಿಗಳ ಕೌಶಲ್ಯ ಕೊರತೆಯನ್ನು ಗುರುತಿಸಿ ಕೌಶಲ್ಯ ತರಬೇತಿ ನೀಡುವ ಮೂಲಕ ಅವರ ಉದ್ಯೋಗ ಅರ್ಹತೆಯನ್ನು ಉತ್ತಮಗೊಳಿಸಲಾಗುತ್ತಿದೆ. ಈ ಕಾರ್ಯಗಳನ್ನು ನಿರ್ವಹಿಸಲು ಉದ್ಯೋಗ ವಿನಿಮಯ ಕೇಂದ್ರಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳನ್ನಾಗಿ ಉನ್ನತೀಕರಿಸಲಾಗುತ್ತಿದೆ.

ಇವುಗಳ ಮೂಲಕ ಉದ್ಯೋಗಾಕಾಂಕ್ಷಿಗಳಿಗೆ ಮೌಲ್ಯ ವರ್ಧಿತ ಸೇವೆ ನೀಡಲಾಗುತ್ತಿದೆ.

ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿರುವ ಗ್ರಾಮೀಣ ನಿರುದ್ಯೋಗಿ ವಿದ್ಯಾವಂತರು ನೇಮಕಾತಿ ಪರೀಕ್ಷೇಗಳನ್ನು ಆತ್ಮ ವಿಶ್ವಾಸದಿಂದ ತೆಗೆದುಕೊಳ್ಳುವಂತೆ ಸಜ್ಜುಗೊಳಿಸಲು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಸ್ಪಡಿ ಸರ್ಕಲ್ಸ್‌ಗಳನ್ನು ನಿರ್ವಹಿಸಲಾಗುತ್ತಿದೆ. ಇವುಗಳ ಮೂಲಕ ಪರೀಕ್ಷಾ ಪೂರ್ವ ತರಬೇತಿಗಳನ್ನು ಆಸಕ್ತ ಅಭ್ಯರ್ಥಿಗಳಿಗೆ ನೀಡಲಾಗುತ್ತಿದೆ.

ಖಾಸಗಿ ಕ್ಷೇತ್ರದಲ್ಲಿನ ವಿಪುಲ ಅವಕಾಶಗಳನ್ನು ಉದ್ಯೋಗಾಕಾಂಕ್ಷಿಗಳಿಗೆ ತಲುಪಿಸಲು ಉದ್ಯೋಗ ಮೇಳಗಳನ್ನು ಆಯೋಜಿಸುತ್ತಿದ್ದು, ಇದರ ಮೂಲಕ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗದಾತ ರೊಂದಿಗೆ ನೇರ ಸಂಪರ್ಕ ಕಲ್ಪಿಸಲಾಗುತ್ತಿದೆ.

ಈ) ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಪ್ರಶ್ನೆ ಸಂಖ್ಯೆ: 4445

ಅನುಬಂಧ-I

'ಮೇ-2014' ರ ಅಂತ್ಯಕ್ಕೆ ರಾಜ್ಯದ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿ ಖಾಲಿ ದಾಖಲೆಯಲ್ಲಿರುವ ಅಭ್ಯರ್ಥಿಗಳ ಜಿಲ್ಲಾವಾರು ವಿವರ:-

ಕ್ರ. ಸಂ.	ಜಿಲ್ಲೆಯ ಹೆಸರು	ಮೇ-2014 ರ ಅಂತ್ಯಕ್ಕೆ ಖಾಲಿ ದಾಖಲೆಯಲ್ಲಿರುವ ಅಭ್ಯರ್ಥಿಗಳ ಸಂಖ್ಯೆ
1.	ಬೆಂಗಳೂರು (ಗ್ರಾಮಾಂತರ ಹಾಗೂ ನಗರ)	109860
2.	ಬಾಗಲಕೋಟೆ	5328
3.	ಬೆಳಗಾವಿ	27911
4.	ಬಳ್ಳಾರಿ	20547
5.	ಬೀದರ್	12742
6.	ಬಿಜಾಪುರ	9428
7.	ಚಾಮರಾಜನಗರ	6682
8.	ಚಿಕ್ಕಮಗಳೂರು	3472
9.	ಚಿತ್ರದುರ್ಗ	4545
10.	ದಾವಣಗೆರೆ	6296
11.	ಗದಗ	7506
12.	ಗುಲ್ಬರ್ಗಾ	5721
13.	ಹಾಸನ	11163
14.	ಹಾವೇರಿ	4657
15.	ಹುಬ್ಬಳ್ಳಿ	13764
16.	ಕೋಲಾರ	17396

17.	ಕೊಪ್ಪಳ	6281
18.	ಮಡಿಕೇರಿ	11876
19.	ಮಂಡ್ಯ	12049
20.	ಮಂಗಳೂರು (ದಕ್ಷಿಣ ಕನ್ನಡ)	18627
21.	ಮೈಸೂರು	13512
22.	ರಾಯಚೂರು	13027
23.	ಶಿವಮೊಗ್ಗ	7431
24.	ತುಮಕೂರು	4329
25.	ಉಡುಪಿ	6061
26.	ಕಾರವಾರ (ಉತ್ತರ ಕನ್ನಡ)	15966
27.	ಚಿಕ್ಕಬಳ್ಳಾಪುರ	4889
28.	ರಾಮನಗರ	3917
29.	ಯಾದಗಿರಿ	5015
	ಒಟ್ಟು:-	389998

ಪ್ರಶ್ನೆ ಸಂಖ್ಯೆ: 4445

ಅನುಬಂಧ-2

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಹಾಸನ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೋಂದಣಿ ಮಾಡಿಕೊಂಡವರ ಸಂಖ್ಯೆ ಹಾಗೂ ಆ ಕಚೇರಿಯಿಂದ ಉದ್ಯೋಗ ದೊರೆತವರ ಸಂಖ್ಯೆ ಈ ಕೆಳಗಿನಂತಿದೆ:-

ಕ್ರ. ಸಂ.	ವರ್ಷ	ನೋಂದಣಿ ಮಾಡಿಕೊಂಡವರ ಸಂಖ್ಯೆ.	ಉದ್ಯೋಗ ದೊರೆತ ಅಭ್ಯರ್ಥಿಗಳ ಸಂಖ್ಯೆ
1.	2011-12	4,271	24
2.	2012-13	2,527	35
3.	... 2013-14	2,570	87
4.	2014-15 (ಮೇ-2014 ರ ಅಂತ್ಯಕ್ಕೆ).	869	11
	ಒಟ್ಟು:-	10,237	157

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಹಾಸನ ಈ ಕಚೇರಿಯಿಂದ ಕಳೆದ ಮೂರು ವರ್ಷಗಳಲ್ಲಿ ಸ್ವಿಡ ಸರ್ಕಲ್ಸ್ ಕಾರ್ಯಕ್ರಮದಡಿಯಲ್ಲಿ ನೀಡಿದ ತರಬೇತಿ ವಿವರ ಈ ಕೆಳಗಿನಂತಿದೆ:-

ಕ್ರ. ಸಂ.	ವರ್ಷ	ಸ್ವಡಿ ಸರ್ಕಲ್ಸ್ ತರಬೇತಿ ನೀಡಿದ ಸಂಖ್ಯೆ.	ಸ್ವಡಿ ಸರ್ಕಲ್ಸ್ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ.
1.	2011-12	1	35
2.	2012-13	3	174
3.	2013-14	2	49
4.	2014-15 (ಮೇ-2014 ರ ಅಂತ್ಯಕ್ಕೆ).	-	-
	ಒಟ್ಟು:-	6	258